



## ಯೇತಿ ಸೆರೆಯೆಂಬ ಪುಕಾರು

2011ರಲ್ಲಿ ರಷ್ಯಾದಲ್ಲಿ ಯೇತಿಯನ್ನು ಜೀವಂತವಾಗಿ ಸೆರೆಹಿಡಿಯಲಾಗಿದೆ ಎಂದು ಸುದ್ದಿಯಾಗಿತ್ತು. ಆದುದಿಷ್ಟು. ಜಾನುವಾರುಗಳ ಕೊಟ್ಟಿಗೆಯ ಮೇಲೆ ದಾಳಿ ಮಾಡಿದ್ದ ಪ್ರಾಣಿಯೊಂದರ ಕಾಲಿಗೆ, ಆ ಕೊಟ್ಟಿಗೆಯ ಮಾಲೀಕ ಗುಂಡುಹೊಡೆದಿದ್ದ. ಗಾಯಗೊಂಡ ಆ ಪ್ರಾಣಿ ಎರಡು ಕಾಲಿನಲ್ಲಿ ಓಡಿಹೋಗಿತ್ತು. ಕರಡಿಯನ್ನು ಹೋಲುವಂತಿದ್ದ ಆ ಪ್ರಾಣಿಯನ್ನೇ ಯೇತಿ ಎಂದು ಸ್ಥಳೀಯನೊಬ್ಬ ಪುಕಾರು ಹಬ್ಬಿಸಿದ್ದ.

ಡೇನಿಯಲ್ ಸಿ. ಟೇಲರ್ ಎನ್ನುವ ಸಂಶೋಧಕ ಯೇತಿಗಳ ಬಗ್ಗೆ ವಿಸ್ತೃತ ಅಧ್ಯಯನ ನಡೆಸಿದ್ದಾನೆ. ಹಿಮಾಲಯದ ತಪ್ಪಲಿನ ಊರುಗಳಲ್ಲಿ ಬೀಡುಬಿಟ್ಟು, ಅಲ್ಲಿನ ಬುಡಕಟ್ಟು ಜನರ ತಿಳಿವಳಿಕೆಯೊಂದಿಗೆ ಡೇನಿಯಲ್ ಅಧ್ಯಯನ ನಡೆಸಿದ್ದಾನೆ. ತನ್ನ ಅಧ್ಯಯನದ ಫಲಿತವನ್ನು ‘ದಿ ಎಕಾಲಜಿ ಆಫ್ ಎ ಮಿಸ್ಟರಿ’ ಕೃತಿಯಲ್ಲಿ ದಾಖಲಿಸಿರುವ ಆತ, ಯೇತಿಗಳ ಅಸ್ತಿತ್ವವನ್ನು ಸಂಪೂರ್ಣ ಅಲ್ಲಗಳೆದಿದ್ದಾನೆ. ಹಿಮಾಲಯದ ತಪ್ಪಲಲ್ಲಿ ಕಂಡುಬರುವ ಏಷ್ಯನ್ ಕಪ್ಪು ಕರಡಿಗಳನ್ನೇ ಯೇತಿಗಳೆಂದು ತಪ್ಪಾಗಿ ಭಾವಿಸಲಾಗಿದೆ. ಈ ಕರಡಿಗಳು ಮರದಿಂದ ಇಳಿಯುವಾಗ ಕೊಂಬೆಯನ್ನು ಹಿಡಿಯಲು ಬೆರಳನ್ನು ಹಿಮ್ಮುಖವಾಗಿ ಮಡಚಬಲ್ಲವು. ಹಿಮದಲ್ಲಿ ಅವುಗಳ ಹೆಜ್ಜೆಗುರುತು ಮನುಷ್ಯರ ಪಾದಗಳಂತೆಯೇ ಕಾಣಿಸುತ್ತವೆ ಎನ್ನುವುದು ಟೇಲರ್‌ನ ಅಭಿಪ್ರಾಯ.

